File No: B2/GFL/Approach Road/CR-34 /2022-23.

Office of the
Conservator of Forests,
Kanara Circle, Sirsi
Dated: 16/03/2023

To,

The Principal Chief Conservator of Forests,
(Forest Conservation) and Nodal Officer (FCA)
Aranya Bhavan, Malleshwaram 18th cross,
Bangalore-560003

Sir,

**Sub:** Diversion of 1.4197 hectare (revised from 0.9896 hectare) of forest land in Kagal village F.Sy. No.130A. Kumta Hobli and Taluk, uttara Kannada Disitrict (Honavar Forest Division) for construction of Asphalted Approach Road to the proposed Resort (in Patta land) in favour of M/s Biogen Wellness Privatie Ltd, Beerkodi, Kagal village, Kumta Taluk, Uttara Kannada District

Proposal no: FP/KA/APPROACH/36720/2018.

**Ref:**
1. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಆಫಿಸರ್ (ಎಫ್ ಸಿಎ), ಬೆಂಗಳೂರು ರವರ ಕಚೇರಿ ಪತ್ರ ಸಂ:KFD/HOFF/A52K(GFL)/82/2018-FC, ದಿನಾಂಕ: 24-02-2023.
2. ಈ ಕಚೇರಿ ಪತ್ರ ಸಂ:ಬಿ2/ಜಿಎಫ್ ಎಲ್/Approach Road/CR-34/2022-23, ದಿನಾಂಕ: 24-02-2023.
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರ ಕಚೇರಿ ಪತ್ರ ಸಂ: ಬಿ2/ಜಿಎಫ್ಎಲ್/ದೂರು/ವಿವ-06/2022-23 ದಿನಾಂಕ: 03-03-2023.

******

ಕಾಗಲ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಂಗಡಿಕೇರಿ ಶಾಲೆಯಿಂದ ಕಿರಬೇಲೆ ಸಮುದ್ರ ತೀರಕ್ಕೆ ಹೋಗುವ ಸಾರ್ವಜನಿಕರಿಗೆ ಕಿರುಬೇಲೆ ಆಶ್ರಮಕ್ಕೆ ಹೋಗುವ ಸಾರ್ವಜನಿಕರಿಗೆ ಕಿರಿಬೇಲೆ ಜಟಗನ ದೇವಸ್ಥಾನಕ್ಕೆ ಹೋಗುವ ಭಕ್ತರಿಗೆ ಹಾಗೂ ಕಿರುಬೇಲೆ ಊರಿನ ನಾಗರೀಕರ ಮನೆಗಳಿಗೆ ಸಂಪರ್ಕ ಕಲ್ಪಿಸುವ ಸಾರ್ವಜನಿಕ ರಸ್ತೆಯನ್ನು ಖಾಸಗಿ ವ್ಯಕ್ತಿಗಳಾದ ಮಂಗಲದಾಸ ಶೆಟ್ಟಿ, ಸುಪ್ತಾ ಮಂಗಲದಾಸ ಶೆಟ್ಟಿ, ರಶ್ಮಿ ಸರ್ಜಿತ ಶೆಟ್ಟಿ, ಸರ್ಜಿತ ಶೆಟ್ಟಿ ಇವರಿಗೆ ಪರಭಾರೆ ಅಥವಾ ಲೀಸ್ ಗೆ ನೀಡದಂತೆ ಹಾಗೂ ಈ ರಸ್ತೆಯನ್ನು ಸಾರ್ವಜನಿಕರ ಓಡಾಟಕ್ಕೆ ಅನಕೂಲವಾಗುವಂತೆ ಮುಕ್ತವಾಗಿಡಲು ಮಾನ್ಯ ಧಾರವಾಡ ಹೈಕೋರ್ಟನಲ್ಲಿ ರಿಟ್ ಅರ್ಜಿ ಸಂಖ್ಯೆ: W.P.No 103726/2021 ರಂತೆ ರಿಟ್ ಅರ್ಜಿ ಸಲ್ಲಿಸಿದ್ದು, ಕಾಗಾಲ ಗ್ರಾಮ ಪಂಚಾಯತ ವ್ಯಾಪ್ತಿಯ ಅಂಗಡಿಕೇರಿ ಶಾಲೆಯಿಂದ ಕಿರಬೇಲೆ ಸಮುದ್ರ ತೀರಕ್ಕೆ ಹಾಗೂ ಕಿರಬೇಲೆ ಆಶ್ರಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಲೀಸ್ ವ ಪರಭಾರೆ ಮಾಡಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡದಂತೆ ಶ್ರೀಕಾಂತ ವೆಂಕ್ಟಪ್ಪ ನಾಯ್ಕ, ಕಾಗಾಲ ಇವರು ದಿನಾಂಕ: 18-07-2022 ರಂದು ನೀಡಿರುವ ಅರ್ಜಿಗೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಲು ಉಲ್ಲೇಖ (1) ರ ಪತ್ರದಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಆಫಿಸರ್ (ಎಫ್ ಸಿಎ), ಬೆಂಗಳೂರು ರವರು ನಿರ್ದೇಶಿಸಿರುವಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರು ಉಲ್ಲೇಖ (3) ರಲ್ಲಿ ಈ ಕಚೇರಿಗೆ ಕೆಳಗಿನಂತೆ ವರದಿ ಸಲ್ಲಿಸಿರುತ್ತಾರೆ.

ಸದರ ಅರ್ಜಿಯ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ವಲಯ ಅರಣ್ಯ ಅಧಿಕಾರಿ, ಕುಮಟಾ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ಇವರಿಗೆ ಸೂಚಿಸಲಾಗಿತ್ತು, ಅದರಂತೆ, ವಲಯ ಅರಣ್ಯ ಅಧಿಕಾರಿ, ಕುಮಟಾ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟಾ ಇವರು ಸ್ಥಳ ಪರಿಶೀಲಿಸಿ, ಸದರಿಯವರು ರಸ್ತೆ ಸಂಪರ್ಕ ಕೋರಿ ಪ್ರಸ್ತಾವನೆ ಸಲ್ಲಿಸಿರುವ ಸ್ಥಳವು ಕಾಗಲ ಅರಣ್ಯ ಸ.ನಂ 130 ರಲ್ಲಿ ಬರುತ್ತಿದ್ದು ಸದರಿ ಪ್ರಸ್ತಾಪಿತ ರಸ್ತೆಯ ಉದ್ದ 1.294 ಕಿ.ಮೀ ಇದ್ದು ಇಲ್ಲಿ ಕಚ್ಚಾರಸ್ತೆ ಇರುತ್ತದೆ. ಅನಾದಿಕಾಲದಿಂದ ಸಾರ್ವಜನಿಕರಿಗೆ ಓಡಾಟ ನಡೆಸುತ್ತಿರುವ ಕಚ್ಚಾರಸ್ತೆಯಿರುತ್ತದೆ. ಈ ಕಚ್ಚಾ ರಸ್ತೆಯಲ್ಲಿ ಓಡಾಟ ನಡೆಸಲು ಸಾರ್ವಜನಿಕರಿಗಾಗಲೀ ಅಥವಾ ಪಂಚಾಯತ ನವರಿಗಾಗಲೀ ಇಲಾಖೆಯಿಂದ ಯಾವುದೇ ಅಡ್ಡಿಪಡಿಸಿದ್ದು ಇರುವದಿಲ್ಲ. ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ ಕಾಗಾಲ ಇವರು ಕಿರುಬೇಲೆ ರಸ್ತೆಯನ್ನು ಯಾವುದೇ ಖಾಸಗಿ ವ್ಯಕ್ತಿಗಳು/ಸಂಸ್ಥೆಯವರು ಪರಿವೇಶ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿದ್ದಲ್ಲಿ ಸದರಿ ಅರ್ಜಿಯನ್ನು ತಿರಸ್ಕರಿಸಿ ಗ್ರಾಮ ಪಂಚಾಯತದಿಂದ ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಅನುಮತಿ ನೀಡಬೇಕಾಗಿ ವಲಯ ಅರಣ್ಯ ಅಧಿಕಾರಿ, ಕುಮಟಾ ಇವರಿಗೆ ಪತ್ರವನ್ನು ನೀಡಿರುತ್ತಾರೆ. (ಪ್ರತಿ ಲಗತ್ತಿಸಿದೆ. ಅನುಬಂಧ-I) ಈ ಕುರಿತು ಸದರಿಯವರಿಗೆ ಅಂತರಜಾಲದ (https://parivesh.nic.in) ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಲು ವಲಯ ಅರಣ್ಯ ಅಧಿಕಾರಿ, ಕುಮಟಾ ಇವರು ತಿಳಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ. ಅನುಬಂಧ-II)

ಅರ್ಜಿದಾರರ ವಿಚಾರಣೆ ನಡೆಸಿ, ಈ ರಸ್ತೆಯನ್ನು ಲೀಸ್ ಮೂಲಕ ಅವರಿಗೆ ಹಸ್ತಾಂತರಿಸಿದರೆ ಈ ರಸ್ತೆಯಲ್ಲಿ ಸಂಚರಿಸುವ ನೂರಾರು ಮೀನುಗಾರರು, ಕಾರ್ಮಿಕರು, ಬೆಟ್ಟಕ್ಕೆ ಹೋಗುವವರು, ಕಿರಬೇಲೆ ನಿವಾಸಿಗಳು, ಆಶ್ರಮದ ಭಕ್ತರು, ಮೇಯಲು ಗುಡ್ಡಕ್ಕೆ ಹೋಗುವ ದನಕರುಗಳಿಗೆ ದಾರಿ ಇರುವುದಿಲ್ಲ ಇವರೆಲ್ಲರೂ ಬಾರಿ ತೊಂದರೆಗೆ ಅನುಭವಿಸಬೇಕಾಗುತ್ತದೆ. ಈ ಕುರಿತು ಧಾರವಾಡ ಹೈಕೋರ್ಟನಲ್ಲಿ ರಿಟ್ ಅರ್ಜಿ ಸಂಖ್ಯೆ: W.P.No 103726/2021 ರಂತೆ ರಿಟ್ ಅರ್ಜಿ ಸಲ್ಲಿಸಿರುತ್ತೇವೆ ಎಂದು ಹೇಳಿಕೆ ನೀಡಿರುತ್ತಾರೆ. (ಪ್ರತಿ ಲಗತ್ತಿಸಿದೆ. ಅನುಬಂಧ-III ರಿಂದ IV)

ಶ್ರೀ ಮಂಗಲದಾಸ ಶೆಟ್ಟಿ, ಬಯೋಜನ್ ವೆಲ್ ನೆಸ್, ಪ್ರೈವೆಟ್ ಲಿಮಿಟೆಡ್, ನಂ.435, ಬೀರಕೋಡಿ, ಕಾಗಾಲ, ತಾ:: ಕುಮಟಾ, ಜಿಲ್ಲೆ: ಉತ್ತರಕನ್ನಡ ಇವರನ್ನು ವಿಚಾರಣೆ ನಡೆಸಿ ಕಾಗಾಲ ಗ್ರಾಮದಲ್ಲಿ ಒಟ್ಟು 51-26-11 ಕ್ಷೇತ್ರ ಜಮೀನನ್ನು ಖರೀದಿಸಿದ್ದು ಸದರ ಜಾಗದ ಅಭಿವೃದ್ಧಿ ಹೊಟೇಲ್ ರೆಸ್ಟೋರೆಂಟ್ ಮತ್ತು ಪ್ರವಾಸೋದ್ಯಮ ಉದ್ದೇಶಕ್ಕಾಗಿ ರಸ್ತೆ ನಿರ್ಮಿಸಲು ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಪ್ರಕಾರ ಅಂತರಜಾಲದಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಮಂಜೂರಿಗೆ ಸಂಬಂಧಿಸಿದಂತೆ ಇಲಾಖಾ ಪ್ರಕ್ರಿಯೆಗಳು ಪ್ರಾರಂಭವಾಗಿರುತ್ತದೆ. ಹಾಗೂ ಹಿರಿಯ ಅಧಿಕಾರಿಗಳ ನಿರ್ದೇಶನ ಮತ್ತು ಮಾರ್ಗದರ್ಶನದಂತೆ ಪ್ರಸ್ತಾವನೆ ಸಲ್ಲಿಸಿದ ರಸ್ತೆಯಂಚಿನಲ್ಲಿ ಗುರುತಿಗಾಗಿ ಶಿಲೆಕಲ್ಲುಗಳನ್ನು ಅಳವಡಿಸಿದ್ದು ಇರುತ್ತದೆ. ಇದು ಸಾರ್ವಜನಿಕರಿಗೆ ತೊಂದರೆ ಕೊಡುವ ಉದ್ದೇಶದಿಂದ ಮಾಡಿದ್ದಾಗಿರುವುದಿಲ್ಲ. ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುವ ಯಾವುದೇ ಕಾರ್ಯಚಟುವಟಿಕೆಗಳನ್ನು ನಡೆಸಿದ್ದು ಇರುವುದಿಲ್ಲ. ಶ್ರೀಕಾಂತ ನಾಯ್ಕ ಹಾಗೂ ಊರನಾಗರೀಕರು ಕಿರಬೇಲೆ ಕಾಗಾಲ ಇವರು ಮಾಡಿರುವ ಅರ್ಜಿಯು ಸತ್ಯಕ್ಕೆ ದೂರವಾಗಿದ್ದು, ಸದರಿ ರಸ್ತೆ ನಿರ್ಮಾಣಕ್ಕೆ ತಮ್ಮ ಇಲಾಖೆಯ ನಿಯಮಗಳಂತೆ ಕಾನೂನಿನ ಪ್ರಕಾರವೇ ನಡೆದುಕೊಳ್ಳುತ್ತೇನೆಂದು ಹೇಳಿಕೆಯನ್ನು ನೀಡಿರುತ್ತಾರೆ. (ಪ್ರತಿ ಲಗತ್ತಿಸಿದೆ. ಅನುಬಂಧ-V) ಎಂದು ಉಲ್ಲೇಖ (3) ಮತ್ತು (4) ರನ್ವಯ ವರದಿಯನ್ನು ಸಲ್ಲಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ. ಅನುಬಂಧ-VI ರಿಂದ VII)

ಕಾರಣ ಶ್ರೀ ಮಂಗಲದಾಸ ಶೆಟ್ಟಿ, ಬಯೋಜನ್ ವೆಲ್ ನೆಸ್, ಪ್ರೈವೆಟ್ ಲಿಮಿಟೆಡ್, ನಂ.435, ಬೀರಕೋಡಿ, ಕಾಗಾಲ, ತಾ:: ಕುಮಟಾ, ಜಿಲ್ಲೆ: ಉತ್ತರಕನ್ನಡ ಇವರು ರಸ್ತೆ ಸಂಪರ್ಕ ಕೋರಿ ಪ್ರಸ್ತಾವನೆ ಸಲ್ಲಿಸಿರುವ ಸ್ಥಳವು ಕಾಗಲ ಅರಣ್ಯ ಸ.ನಂ 130 ರಲ್ಲಿ ಬರುತ್ತಿದ್ದು ಸದರಿ ಪ್ರಸ್ತಾಪಿತ ರಸ್ತೆಯು ಉದ್ದ 1.294 ಕಿ.ಮೀ ಇದ್ದು ಇಲ್ಲಿ ಕಚ್ಚಾರಸ್ತೆ ಇರುತ್ತದೆ. ಹಾಗೂ ಧಾರವಾಡ ಹೈಕೋರ್ಟನಲ್ಲಿ ರಿಟ್ ಅರ್ಜಿ ಸಂಖ್ಯೆ: W.P.No 103726/2021 ನೇದನ್ನು ಮಾನ್ಯ ನ್ಯಾಯಾಲಯವು ದಿನಾಂಕ: 14-02-2023 ರಂದು ವಜಾಗೊಳಿಸಿ ಆದೇಶಿಸಿದ್ದು ಇರುತ್ತದೆ. (ಪ್ರತಿ ಲಗತ್ತಿಸಿದೆ. ಅನುಬಂಧ-VIII ರಿಂದ IX) ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ರವರು ಈ ಕಚೇರಿಗೆ ಸಲ್ಲಿಸಿರುವ ವರದಿಯನ್ನು ಅಡಕಗಳೊಂದಿಗೆ ತಮ್ಮ ಅವಗಾಹನೆಗಾಗಿ ಗೌರವದೊಂದಿಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,

(ಸಹಿ) 16/03/23

ಅರಣ್ಯ ಸಂರಕ್ಷಣಾಧಿಕಾರಿ,
ಕೆನರಾ ವೃತ್ತ, ಶಿರಸಿ.